# ಟೀವಿ ನೋಡುತ್ತಿದ್ದ ನಾನೇ ಕಣ್ಣೀರಾದೆ

ಐಶ್ವರ್ಯ ಎಚ್.

ಕಲರ್ಸ್ ಕನ್ನಡದ 'ರಾಣಿ' ಕಾವೇರಿ

■ ರಾಘವೇಂದ್ರ

◆ ಕಂಬಿಯ ಹಿಂದೆ ಇರುವ ಕಾವೇರಿಯನ್ನೇ ನೋಡಬೇಕಾ?

ಕಥೆ ಆರಂಭ ಆಗುವುದೇ ಜೈಲಿನಿಂದ. ಕಾವೇರಿ ಜೈಲಿಗೆ ಏಕೆ ಹೋದಳು ಎನ್ನುವುದು ಕುತೂಹಲದ ಅಂಶ. ದಿನಕಳೆದಂತೆ ಆ ಸತ್ಯ ಬಹಿರಂಗವಾಗುತ್ತದೆ. ಹತ್ತು ವರ್ಷಗಳಿಂದ ಬಂಧನದಲ್ಲಿ ಇದ್ದರೂ ತನ್ನ ಪೂರ್ವಾಪರವನ್ನು ಯಾರಿಗೂ ಬಿಟ್ಟುಕೊಟ್ಟಿರುವುದಿಲ್ಲ. ಜೈಲಿನಲ್ಲೇ ಮಗಳು ಹುಟ್ಟಿದ್ದಾಳೆ. ಆಕೆ ಹುಟ್ಟಿರುವುದು ಕುಟುಂಬದ ಯಾರಿಗೂ ಗೊತ್ತಿರುವುದಿಲ್ಲ. ಮಗಳಿಗೆ 10 ವರ್ಷ ತುಂಬುವ ತನಕ ನನ್ನ ಜೊತೆಗೆ ಇದ್ದಳು. ಈಗ ಅವಳನ್ನು ಸಮಾಜದ ಮುಖ್ಯವಾಹಿನಿಗೆ ಕಳಿಸಿಕೊಡಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ. ಆಗ ಅನಾಥಾಶ್ರಮಕ್ಕೆ ಕಳಿಸುವ ವಿಚಾರ ಬರುತ್ತದೆ. ನಾನು ಖಂಡಿತ ಅನಾಥಾಶ್ರಮಕ್ಕೆ ಕಳಿಸಬೇಡಿ. ನನಗೂ ಕುಟುಂಬ ಇದೆ ಎಂದು ಮೊದಲಬಾರಿಗೆ ಖಾಸಗಿ ವಿಷಯವನ್ನು ಬಹಿರಂಗ ಮಾಡುತ್ತೇನೆ. ಯಾರ ಮನೆಗೆ ಕಳಿಸುತ್ತಾರೆ? ಅಲ್ಲಿಂದಲೇ ಧಾರಾವಾಹಿ ಆರಂಭ, ಕಾವೇರಿ ಏಕೆ ಜೈಲಿಗೆ ಹೋದಳು ಎನ್ನುವ ನಿಜವಾದ ಕಥೆ ಆರಂಭವಾಗುತ್ತದೆ. ಕಾವೇರಿಯ ಹಿಂದಿನ ಕಥೆ ಏನು? ಅಮ್ಮ ಇಲ್ಲದೆ ಕಂದಮ್ಮ ರಾಣಿ ಹೇಗಿರುತ್ತಾಳೆ. ಅಮ್ಮ ಒಬ್ಬಳೆ ಜೈಲಿನಲ್ಲಿ ಹೇಗಿರುತ್ತಾರೆ ಎನ್ನುವುದು ಇಲ್ಲಿ ಮುಖ್ಯ.

◆ ನಟನೆಯ ಪ್ರೀತಿ ಹುಟ್ಟಿದ್ದು ಹೇಗೆ?

ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಹುಟ್ಟಿ ಬೆಳೆದಿದ್ದು. ನಮ್ಮ ಪ್ರದೇಶದಲ್ಲಿ ಕಿರುತೆರೆ, ಸಿನಿಮಾಗಳಿಗೆ ಅವಕಾಶ ಕಡಿಮೆ. ಚಿಕ್ಕ ವಯಸ್ಸಿನಿಂದಲೂ ನಟಿಸಬೇಕು ಎನ್ನುವ ಆಸೆ ಇತ್ತು. ಬಿಕಾಂ ಓದಿದ ನಂತರ ನಟನೆಯನ್ನು ಕಲಿಯಲು ಬೆಂಗಳೂರಿಗೆ ಬಂದೆ. ತರಬೇತಿ ಪಡೆದ ನಂತರವೇ ನಟಿಸುವ ಮನಸು ಮಾಡಿದೆ. 'ಯಾರಿವಳು' ಧಾರಾವಾಹಿಯಲ್ಲಿ ಮೊದಲ ಪಾತ್ರ ಮಾಡಿದೆ. ನಂತರ ತೆಲುಗಿನಲ್ಲಿ ನಾಯಕಿ ಆಗುವ ಅವಕಾಶ ಸಿಕ್ಕಿತು. ಅದು ಕನ್ನಡದಲ್ಲೂ ಡಬ್ಬಿಂಗ್ ಆಯಿತು. ಕೃಷ್ಣವರ್ಣೆಯ ಪಾತ್ರ. ನಂತರವೂ ತೆಲುಗಿನಲ್ಲೆ ಮಾಡಿದೆ. ಅದಾದ ಮೇಲೆ ಕನ್ನಡದಲ್ಲಿ 'ಮುದ್ದುಮಣಿಗಳು' ಮಾಡಿದೆ. ಕನ್ನಡದಲ್ಲೇ ಮಾಡಬೇಕು ಎನ್ನುವ ಬಯಕೆ ಇದ್ದಿದ್ದರಿಂದ ಒಂದಿಷ್ಟು ಸಮಯ ಕಾಯಬೇಕಾಯಿತು. ಓದುವಾಗ ಅಭಿನಯಿಸುವ ಅವಕಾಶಗಳು ಸಿಗಲಿಲ್ಲ. ಶಾಲೆಯಲ್ಲಿದ್ದಾಗ ವಾರ್ಷಿಕೋತ್ಸವದಲ್ಲಿ ನಾಟಕ ಡಾನ್ಸ್ ಮಾಡಿದ್ದೆ. ನಟನೆಗೆ ಪೂರಕವಾದ ಯಾವ ಹವ್ಯಾಸವೂ ಇರಲಿಲ್ಲ. ಬೆಂಗಳೂರಿಗೆ ಬಂದ ನಂತರವೇ ಎಲ್ಲ ಕಲಿಯಲು ಸಾಧ್ಯವಾಯಿತು.



◆ ಕಾವೇರಿ ಪಾತ್ರದ ವಿಶೇಷ ಏನು?

ಪಾತ್ರದಲ್ಲಿ ಬದಲಾವಣೆಗಳನ್ನು ನೋಡಲು ಅವಕಾಶ ಇದೆ. ತಾಯಿತನದ ಮಮತೆಯನ್ನು ತೋರುವ ಕಾವೇರಿ, ತಂಗಿ ಮತ್ತು ಪತ್ನಿಯಾಗಿ ಕಾಣಿಸುತ್ತಾಳೆ. ನಟನೆಗೆ ತುಂಬ ಸ್ಕೋಪ್ ಇದೆ. ನಿಜ ಜೀವನದಲ್ಲಿ ಇನ್ನೂ ಮದುವೆ ಆಗಿಲ್ಲ. ಆದರಿಲ್ಲಿ ತಾಯಿಯ ಭಾವನೆಗಳನ್ನು ನೀಡಬೇಕು. ಆರಂಭದಲ್ಲಿ ಕಷ್ಟ ಆಯಿತು. ತಾಯ್ತನದ ಭಾವನೆಗಳನ್ನು ಹಿಡಿಯಲು ಕಷ್ಟ ಆಗುತ್ತಿತ್ತು. ನಿರ್ದೇಶಕಿ ಸ್ವಪ್ನಾ ತುಂಬ ಸಹಾಯ ಮಾಡಿದರು. ಅವರೇ ಹೇಳಿ ನಟನೆ ಕಲಿಸಿದ್ದಾರೆ. ಮೊದಲ ಕಂತು ನೋಡಿ ಅನೇಕರು ಕಣ್ಣೀರು ಹಾಕಿದ್ದಾರೆ. ನಾನೇ ಮಾಡಿದ್ದು ಎಂದು ಗೊತ್ತಿದ್ದೂ ಖುದ್ದು ನಾನೇ ಕಣ್ಣೀರು ಸುರಿಸಿದ್ದೇನೆ. ಇದು ವೀಕ್ಷಕರ ಜೊತೆ ಸಂಬಂಧವನ್ನು ಬೆಸೆಯುತ್ತದೆ. ಹೆಸರಿಗೆ ತಕ್ಕಂತೆ ಮುಗ್ಧೆ. ಯಾವುದೋ ಕಾರಣಕ್ಕೆ ಜೈಲಿಗೆ ಹೋಗಿರುತ್ತಾಳೆ. ಈ ಪಾತ್ರ ನನ್ನೊಂದಿಗೆ ಗಟ್ಟಿಯಾಗಿ ಬೆಸೆದುಕೊಂಡಿದೆ.

ಕಾವೇರಿ ಜೈಲಿಗೆ ಹೋದ ಮೇಲೆ ಬಂಧು ಬಳಗ ಏನೂ ಇಲ್ಲ. ನಂಬಿದವರೆಲ್ಲ ಕೈ ಬಿಡುತ್ತಾರೆ. ಆಕೆಯೇ ತಪ್ಪು ಮಾಡಿದ್ದಾಳೆ ಎಂದು ದೂರುತ್ತಾರೆ. ಅಂತಹ ಹೊತ್ತಿನಲ್ಲಿ ಅವಳ ತಲೆಯಲ್ಲಿ ಆತ್ಮಹತ್ಯೆಯ ಯೋಚನೆ ಬರುತ್ತದೆ. ಆ ಕ್ಷಣವೇ ಆಕೆಗೆ ಗರ್ಭಿಣಿ ಎನ್ನುವ ಸತ್ಯ ಗೊತ್ತಾಗುತ್ತದೆ. ತನ್ನ ಮಗುವಿಗಾಗಿ ಬದುಕುತ್ತಿದ್ದಾಳೆ. ರಾಣಿಗೂ ಅಮ್ಮನೇ ಪ್ರಪಂಚ. ತಾಯಿ ಹೇಳಿದ್ದನ್ನೇ ಮಾಡುತ್ತಾಳೆ. ರಾಣಿ ಕೂಡ ಪಾತ್ರವನ್ನು ತುಂಬ ಚೆನ್ನಾಗಿ ಮಾಡಿದ್ದಾಳೆ. ತೆರೆಯಲ್ಲಿ ತಾಯಿ ಮಗಳ ಅಭಿನಯ ಚೆನ್ನಾಗಿ ಬಂದಿದೆ. ಅನೇಕರು ರಾಣಿ ಮತ್ತು ನಾನು ಒಂದೇ ರೀತಿ ಕಾಣುತ್ತೇವೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲ ಕೆಲವರು ಸ್ವಂತ ಮಗಳಾ ಎಂದು ಕೇಳಿದ್ದೂ ಇದೆ. ಅಮ್ಮ–ಮಗಳು ಒಬ್ಬರಿಗೊಬ್ಬರು ಬದುಕುತ್ತಿದ್ದಾರೆ.

◆ ಮುಂದಿನ ದಿನಗಳ ಬಗ್ಗೆ ನಿಮ್ಮ ಯೋಚನೆ ಏನಿದೆ?

ನಟನೆ ದೇವರು ಕೊಟ್ಟ ಕಲೆ ಎನ್ನುವ ಭಾವನೆ ಇದೆ. ಎಲ್ಲರೂ ನಟರಾಗಲು ಆಗುವುದಿಲ್ಲ. ಒಳ್ಳೆಯ ಪಾತ್ರವನ್ನು ಮಾಡಬೇಕು. ಸಿನಿಮಾದಲ್ಲಿಯೂ ನಟಿಸಬೇಕು. ತಾಯಿ ಪಾತ್ರವನ್ನು ಮಾಡಿರುವುದು ತುಂಬ ಖುಷಿ ಕೊಟ್ಟಿದೆ. ನಟನೆಯನ್ನು ಎಂತಹ ಸಂದರ್ಭದಲ್ಲೂ ಬಿಡುವ ಮನಸ್ಸಿಲ್ಲ. 'ಜನ್ಮೋತ್ಸವ' ಸಿನಿಮಾ ಸದ್ಯ ಬಿಡುಗಡೆ ಆಗುತ್ತಿದೆ. ಅದರಲ್ಲೂ ತಾಯ್ತನದ ಅಂಶ ಇದೆ. ಯಾವ ಪಾತ್ರ ಬರುತ್ತೋ ಅದನ್ನು ಮಾಡುತ್ತೇನೆ.

◆ ಪಾತ್ರದ ಆಯ್ಕೆಯನ್ನು ಹೇಗೆ ಮಾಡುತ್ತೀರಿ?

ಪಾತ್ರದಲ್ಲಿ ಗ್ಲಾಮರ್ ಲುಕ್– ಪ್ರೀತಿ ಪ್ರೇಮ ಎನ್ನುವ ಅಂಶವನ್ನು ಹುಡುಕುವುದಿಲ್ಲ. ಒಟ್ಟಾರೆ ಪಾತ್ರ ಮೌಲ್ಯದಿಂದ ಕೂಡಿರಬೇಕು. ಕಥೆಗೆ ಅದು ಮಹತ್ವದ ಅಂಶ ಅನ್ನಿಸಬೇಕು. ಡಿಗ್ಲಾಮರ್ ಆದರೂ ಮಾಡುವೆ. ಮೇಕಪ್ ಇಲ್ಲದೆ ಇದ್ದರೂ ಮಾಡುತ್ತೇನೆ. ಕಾವೇರಿಗೆ ಮೇಕಪ್ ರಹಿತವಾಗಿ ನಟಿಸುತ್ತಿದ್ದೇನೆ. ಎಷ್ಟು ಸರಳವಾಗಿ ಇರುತ್ತೇನೋ ಅಷ್ಟು, ಜನರನ್ನು ಮುಟ್ಟಲು ಸಾಧ್ಯವಾಗುತ್ತದೆ. ಯಾವುದೇ ಪಾತ್ರ ಆದರೂ ನಟನೆಗೆ ಒಳ್ಳೆಯ ಅವಕಾಶ ಇರಲೇಬೇಕು ಎಂದು ಬಯಸುತ್ತೇನೆ. ದಿನವೂ ಹೊಸ ಸೀನ್ ಮತ್ತು ಎಮೋಷನ್ ಇರಬೇಕು ಎನ್ನುವುದು ನನ್ನ ಬಯಕೆ. ■